RNU AIR DHARWAD

**AUGUST 30,2024**
**ALL INDIA RADIO- DHARWAD**
**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಕೇಂದ್ರದಿಂದ 80 ಸಾವಿರ ಕೋಟಿ ರೂಪಾಯಿ ಅನುದಾನ ಬಾಕಿ; 16ನೇ ಹಣಕಾಸು ಆಯೋಗದಿಂದ ಸಕಾರಾತ್ಮಕ ಸ್ಪಂದನೆ – ಸಿದ್ದರಾಮಯ್ಯ.**

- **ಸಂಪೂರ್ಣತಾ ಅಭಿಯಾನ: ಬಳ್ಳಾರಿ ಜಿಲ್ಲೆ ಆಶೋತ್ತರ ತಾಲೂಕು ಕಂಪ್ಲಿಯಲ್ಲಿ, ಆರೋಗ್ಯ ಇಲಾಖೆಯಿಂದ ಜನ ಜಾಗ್ರತಿ.**

- **'ಒಂದು ಜಿಲ್ಲೆ, ಒಂದು ತಾಣ'; ಕೊಪ್ಪಳದ ಇಟಗಿ ಶ್ರೀ ಮಹಾದೇವ ದೇಗುಲದ ಅಭಿವೃದ್ಧಿಗೆ, ಕ್ರಿಯಾ ಯೋಜನೆ – ನಲಿನ್ ಅತುಲ್.**

- **ಹಾಕಿ ಮಾಂತ್ರಿಕ, ಮೇಜರ್ ಧ್ಯಾನಚಂದ್ ಜನ್ಮ ದಿನ; ರಾಷ್ಟ್ರೀಯ ಕ್ರೀಡಾ ದಿನವಾಗಿ ಆಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಕಳೆದ ಐದು ವರ್ಷಗಳಲ್ಲಿ, ರಾಜ್ಯಕ್ಕೆ 80 ಸಾವಿರ ಕೋಟಿ ರೂಪಾಯಿ ಅನುದಾನದ ಕೊರತೆಯಾಗಿದೆ. ಇದನ್ನು ಆದಷ್ಟು ಬೇಗ ಸರಿ ಪಡಿಸಿ, ಕೇಂದ್ರದಿಂದ ರಾಜ್ಯದ ಪಾಲನ್ನು ಬಿಡುಗಡೆ ಮಾಡಲು, 16ನೇ ಹಣಕಾಸು ಆಯೋಗದಿಂದ ಸಕಾರಾತ್ಮಕ ಸ್ಪಂದನೆ ದೊರಕಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.**

**16ನೇ ಹಣಕಾಸು ಆಯೋಗದ ಅಧ್ಯಕ್ಷ ಡಾಕ್ಟರ್ ಅರವಿಂದ ಪನಗರಿಯಾ ಅವರೊಂದಿಗೆ ಬೆಂಗಳೂರಿನಲ್ಲಿ ಸಭೆ ನಡೆಸಿ, ಬಳಿಕ ಸುದ್ದಿಗಾರರಿಗೆ ಮುಖ್ಯಮಂತ್ರಿ ಮಾಹಿತಿ ನೀಡಿದರು.**

ಕಲ್ಯಾಣಕರ್ನಾಟಕ ಭಾಗದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಪ್ರತಿ ವರ್ಷ, 5 ಸಾವಿರ ಕೋಟಿಯಂತೆ ಐದು ವರ್ಷಕ್ಕೆ 25 ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತಿದೆ. ಕೇಂದ್ರ ಸರ್ಕಾರ ಇದಕ್ಕೆ ಅನುರೂಪದ ಅನುದಾನ ನೀಡಬೇಕೆಂದು ಕೋರಲಾಗಿದೆ ಎಂದರು.

ಈ ಕುರಿತ ಸಮಗ್ರ ವಿವರವುಳ್ಳ, ರಾಜ್ಯದ ಮನವಿಯನ್ನು ಮುಖ್ಯಮಂತ್ರಿಯವರು, ಹಣಕಾಸು ಆಯೋಗದ ಅಧ್ಯಕ್ಷರಿಗೆ ನೀಡಿದರು.

ಆಯೋಗದ ಅಧ್ಯಕ್ಷ ಅರವಿಂದ ಪನಗರಿಯಾ ಮಾತನಾಡಿ, 16ನೇ ಭಾರತೀಯ ಹಣಕಾಸು ಆಯೋಗ ಇದು ವರೆಗೆ ಐದು ರಾಜ್ಯಗಳಿಗೆ ಭೇಟಿ ನೀಡಿ, ರಾಜ್ಯ ಸರ್ಕಾರಗಳಿಂದ ಅಗತ್ಯ ಮಾಹಿತಿ ಸಂಗ್ರಹಿಸಿದೆ ಎಂದರು.

ಎಲ್ಲ ರಾಜ್ಯಗಳ ಅಭಿಪ್ರಾಯ ಸಂಗ್ರಹಿಸಿ, ಬಳಿಕ ಆಯೋಗ ಕೇಂದ್ರಕ್ಕೆ ತನ್ನ ಶಿಫಾರಸು ಸಲ್ಲಿಸಲಿದೆ ಎಂದು ತಿಳಿಸಿದರು.

<><><>

ಸಂಪೂರ್ಣತಾ ಅಭಿಯಾನದಡಿ, ಬಳ್ಳಾರಿ ಜಿಲ್ಲೆಯ ಆಶೋತ್ತರ ತಾಲೂಕು ಕಂಪ್ಲಿಯಲ್ಲಿ ಆರೋಗ್ಯ ಇಲಾಖೆ ಕೈಗೊಂಡ ಜನ ಜಾಗ್ರತಿ ಆಂದೋಲನದ ಪರಿಣಾಮ, ತೂಕ ಕಡಿಮೆ ಇರುವ 344 ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುವುದು ಬೆಳಕಿಗೆ ಬಂದಿದೆ.

ಕಳೆದ 45 ದಿನಗಳಲ್ಲಿ ಸಕಾಲಿಕ ಚಿಕಿತ್ಸೆ ಮತ್ತು ಆರೈಕೆಯನ್ನು ಖಾತ್ರಿ ಪಡಿಸಿದ ಹಿನ್ನೆಲೆ, ಎಲ್ಲ ಕಂದಮ್ಮಗಳ ಆರೋಗ್ಯ ಈಗ ಸ್ಥಿರಗೊಂಡು, ಆರೋಗ್ಯವಂತ ಶಿಶುಗಳಾಗಿವೆ.

ಗರ್ಭಿಣಿಯರು, ತಾಯಂದಿರು ಮತ್ತು ಶೈಶವಾವಸ್ಥೆ ಮಕ್ಕಳ ಆರೈಕೆ ಖಾತ್ರಿ ಪಡಿಸಲು, ಕಂಪ್ಲಿ ತಾಲೂಕಿನ ಎಮ್ಮಿಗನೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಉನ್ನತೀಕರಿಸಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಂಪ್ಲಿ ತಾಲೂಕಿನಲ್ಲಿ ಕೈಗೊಂಡ ಕ್ರಮಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ರಮೇಶ ಬಾಬು.

<><><>

ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ರಮೇಶ ಬಾಬು ಧ್ವನಿ 43 ಸೆಕೆಂದುಗಳು

<><><>

ಗದಗ ಜಿಲ್ಲೆ, ಲಕ್ಷ್ಮೇಶ್ವರ ಪಟ್ಟಣದಲ್ಲಿ, ಧಾರವಾಡ ವಲಯದ ಕೇಂದ್ರ ಸಂವಹನ ಇಲಾಖೆ, ಕೇಂದ್ರ ಸರ್ಕಾರದ ವಿವಿಧ ಜನಪರ ಯೋಜನೆಗಳ ಕುರಿತು, ಮಾಹಿತಿ ಹಾಗೂ ಛಾಯಾಚಿತ್ರ ಪ್ರದರ್ಶಿನಿ ಆಯೋಜಿಸಿತ್ತು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮೃತ್ಯುಂಜಯ ಮಾತನಾಡಿ, ರಾಷ್ಟ್ರೀಯ ಪೋ ’ಣ್ ಅಭಿಯಾನ ಯೋಜನೆ ಅಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಇರುವ ಸೌಲಭ್ಯಗಳು, ಮಕ್ಕಳ ಬೆಳವಣಿಗೆಗೆ ಪೂರಕವಾದ ಪೌಷ್ಟಿಕಾಂಶ ಆಹಾರಗಳ ಕುರಿತು, ಮಾಹಿತಿ ನೀಡಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಪ್ರಕಾಶ ಕರ್ಜಗಿ ಅವರು ಮಾತನಾಡಿ, ಆಯು ’ಾನ್ ಭಾರತ್ ಕಾರ್ಡ್ ಮತ್ತು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಕೈಗೊಂಡ ಕ್ರಮಗಳ ಕುರಿತು ವಿವರ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ, ಮಿ ’ನ್ ಶಕ್ತಿ ಯೋಜನೆ ಕುರಿತು, ಮಧುಶ್ರೀ ಉಪ್ಪಾರ ತಿಳಿಸಿದರು.

ಕೇಂದ್ರ ಸಂವಹನ ಇಲಾಖೆಯ ಸಂಯೋಜಕ, ಮುರಳೀಧರ ಕಾರಭಾರಿ ಅವರು ರಾಷ್ಟ್ರೀಯ ಕ್ರೀಡಾ ದಿನದ ಪ್ರತಿಜ್ಞಾ ವಿಧಿ ಬೋಧಿಸಿದರು.

<><><>

ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ 6 ಲಕ್ಷ 83 ಸಾವಿರ, ಪ್ರಧಾನಮಂತ್ರಿ ಜನ್ ಧನ್ ಖಾತೆ ತೆರೆದಿದ್ದು, ಮಹಿಳೆಯರಲ್ಲಿ ಹೆಚ್ಚು ಆರ್ಥಿಕ ಸಾಕ್ಷರತೆ ಮೂಡಿದೆ ಎಂದು, ಕೇಂದ್ರ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

ಪ್ರಧಾನಮಂತ್ರಿ ಜನ್ ಧನ್ ಯೋಜನೆಯಡಿ ತೆರೆದ ಖಾತೆಗಳಲ್ಲಿ ಒಟ್ಟು 464 ಕೋಟಿ 54 ಲಕ್ಷ ರೂಪಾಯಿ ಜಮೆಯಾಗಿದೆ ಎಂದು, ಸಂಸದ ಜೋಶಿ ಮಾಹಿತಿ ನೀಡಿದ್ದಾರೆ.

ಪ್ರಧಾನಮಂತ್ರಿ ಜನ್ ಧನ್ ಯೋಜನೆಯಡಿ ಖಾತೆ ತೆರೆದ 4 ಲಕ್ಷ 52 ಸಾವಿರದ 99 ಜನ ಗ್ರಾಹಕರಿಗೆ, ರುಪೇ ಕಾರ್ಡ್ ಒದಗಿಸಲಾಗಿದೆ.

<><><>

ಪ್ರಧಾನಮಂತ್ರಿ ಜನ್ ಮನ್ ಯೋಜನೆ:ಪಿ.ಎಂ ಜನದ ಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನದಡಿ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ, ದಕ್ಷಿಣಕನ್ನಡ ಜಿಲ್ಲೆಗೆ  ಕೇಂದ್ರ ಸರ್ಕಾರದಿಂದ, 10 ಕೋಟಿ 32 ಲಕ್ಷ ರೂಪಾಯಿ ಅನುದಾನ ಬಿಡುಗಡೆಯಾಗಿದೆ ಎಂದು, ದಕ್ಷಿಣಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ತಿಳಿಸಿದ್ದಾರೆ.

ಬುಡಕಟ್ಟು ಸಮುದಾಯವನ್ನು ಮುಖ್ಯ ವಾಹಿನಿಗೆ ತರುವ, ಪಿಎಂ ಜನ್ ಮನ್ ಯೋಜನೆಯಡಿ, ದಕ್ಷಿಣಕನ್ನಡ ಜಿಲ್ಲೆಯನ್ನು ಗುರುತಿಸಿ, ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಈ ಅನುದಾನವನ್ನು ನೀಡಿದೆ ಎಂದು ಸಂಸದ ಚೌಟ ಮಾಹಿತಿ ನೀಡಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

'ಒಂದು ಜಿಲ್ಲೆ, ಒಂದು ತಾಣ' ಯೋಜನೆ ಅಡಿ, ಕೊಪ್ಪಳದ ಇಟಗಿ ಶ್ರೀ ಮಹಾದೇವ ದೇವಾಲಯದ ಸಮಗ್ರ ಅಭಿವೃದ್ಧಿ ಸೇರಿದಂತೆ, ಜಿಲ್ಲೆಯ ಪ್ರಮುಖ ಪ್ರವಾಸ ತಾಣಗಳ ಯೋಜಿತ ಅಭಿವೃದ್ಧಿಗೆ, ಸಂಯೋಜಿತ ಕ್ರಿಯಾ ಯೋಜನೆ ರೂಪಿಸುವಂತೆ, ಜಿಲ್ಲಾಧಿಕಾರಿ ನಲಿನ್ ಅತುಲ್, ಸಂಬಂಧಿಸಿದ ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ, ಸಮನ್ವಯ ಸಾಧಿಸಲು ಸೂಚಿಸಿದ್ದಾರೆ.

ಕೊಪ್ಪಳ ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳ ಬಳಿ ಕೈಗೊಂಡಿರುವ, ಅಭಿವೃದ್ಧಿ ಕಾಮಗಾರಿಗಳ ಕುರಿತು, ಜಿಲ್ಲಾಧಿಕಾರಿ ಪ್ರಗತಿ ಪರಿಶೀಲಿಸಿದರು.

'ಕೊಪ್ಪಳ ಬ್ರ್ಯಾಂಡ್ ಯೋಜನೆ' ಅಡಿ, ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳನ್ನು ಜಾಲತಾಣ, ಸಾಮಾಜಿಕ ಮಾಧ್ಯಮ ಹಾಗೂ ಆನ್ಲೈನ್ ವೇದಿಕೆಗಳ ಮೂಲಕ ಪ್ರಚುರ ಪಡಿಸಿ, ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಎಂದರು.

ಜಿಲ್ಲೆಯ ಪ್ರಮುಖ ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಾದ, ಹುಲಗಿಯ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ, ಕನಕಗಿರಿಯ ಶ್ರೀ ಕನಕಾಚಲಪತಿ ದೇವಸ್ಥಾನ, ಹಿರೇಬೇಣಕಲ್ ಮೋರೆರ್ ಬೆಟ್ಟ, ಇಟಗಿಯ ಶ್ರೀ ಮಹಾದೇವ ದೇವಾಲಯ, ಹನುಮನುದಿಸಿದ ಅಂಜನಾದ್ರಿ ಬೆಟ್ಟದ ಪ್ರವಾಸಿ ಮಂದಿರ ನಿರ್ಮಾಣ ಹಾಗೂ ಮೂಲ ಸೌಕರ್ಯ ಕಲ್ಪಿಸಲು, 100 ಕೋಟಿ ರೂಪಾಯಿ ಮತ್ತು ಅಭಿವೃದ್ಧಿ ಪಡಿಸಲು ಹೆಚ್ಚುವರಿಯಾಗಿ, 100 ಕೋಟಿ ರೂಪಾಯಿ ಅನುದಾನ ದೊರೆಯಲಿದೆ ಎಂದು, ಜಿಲ್ಲಾಧಿಕಾರಿ ನಲಿನ್ ಅತುಲ್ ತಿಳಿಸಿದರು.

<><><>

ಹಾಕಿ ಮಾಂತ್ರಿಕ, ಮೇಜರ್ ಧ್ಯಾನಚಂದ್ ಅವರ ಜನ್ಮದಿನದ ಹಿನ್ನೆಲೆ, ರಾಷ್ಟ್ರೀಯ ಕ್ರೀಡಾ ದಿನವನ್ನು ದೇಶಾದ್ಯಂತ, ವಿಶಿಷ್ಟವಾಗಿ ಆಚರಿಸಲಾಯಿತು.

'ಖೇಲೇಗಾ ಇಂಡಿಯಾ, ತೋ ಖಿಲೇಗಾ ಇಂಡಿಯಾ' ಧ್ಯೇಯದೊಂದಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಖೇಲೋ ಇಂಡಿಯಾ ಆಶಯದಂತೆ, ಎಲ್ಲ ಜಿಲ್ಲಾ ಕ್ರೀಡಾಂಗಣದಲ್ಲಿ ನಿನ್ನೆ ಒಂದು ಗಂಟೆ ಹೊರಾಂಗಣ ಕ್ರೀಡೆಗಳನ್ನು ಆಯೋಜಿಸಿ, ಮೇಜರ್ ಧ್ಯಾನಚಂದ್ ಅವರಿಗೆ ಶ್ರದ್ಧಾ ಸುಮನ ಅರ್ಪಿಸಲಾಯಿತು.

ಬೆಂಗಳೂರಿನ ದೇವನಹಳ್ಳಿ ಸಮೀಪ, 50 ಎಕರೆ ಜಾಗೆಯಲ್ಲಿ, ಕ್ರೀಡಾ ನಗರಿ ನಿರ್ಮಿಸಲಾಗುವುದು ಎಂದು, ಗೃಹ ಖಾತೆ ಸಚಿವ ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದ ಒಲಿಂಪಿಕ್ ಭವನದಲ್ಲಿ ಆಯೋಜಿಸಿದ್ದ, ರಾಷ್ಟ್ರೀಯ ಕ್ರೀಡಾ ದಿನದ ಪ್ರಧಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಧಾರವಾಡದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸಿದ್ದ, ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು, ಧಾರವಾಡದ, ಕರ್ನಾಟಕ ಬಾಲ ವಿಕಾಸ ಅಕಾದೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ಉದ್ಘಾಟಿಸಿ ಮಾತನಾಡಿ, ಆರೋಗ್ಯ ಪೂರ್ಣ ದೇಹ, ಮನಸ್ಸು ಮತ್ತು ಜೀವನಕ್ಕೆ, ಕ್ರೀಡೆಗಳು ಅಗತ್ಯ ಎಂದರು.

ಗದಗನ ಮಹಾತ್ಮ ಗಾಂಧಿ ಹಾಕಿ ಜಿಲ್ಲಾ ಕ್ರೀಡಾಂಗಣದಲ್ಲಿ, ಮೇಜರ್ ಧ್ಯಾನಚಂದ್ ಅವರ ಜನ್ಮ ದಿನದ ಅಂಗವಾಗಿ, ಹಾಕಿ ಪಂದ್ಯಾವಳಿಯನ್ನು ವಿಧಾನ ಪರಿ ಷತ್ ಸದಸ್ಯ ಎಸ್.ವಿ.ಸಂಕನೂರ ಉದ್ಘಾಟಿಸಿದರು. ದೇಶದಲ್ಲಿ ಐಕ್ಯತೆ, ಕ್ರೀಡಾ ಮನೋಭಾವ ಮತ್ತು ಸಹೋದರತ್ವ ಉದ್ದೀಪಿಸಲು, ಕ್ರೀಡೆಗಳು ಸಹಕಾರಿ ಎಂದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ, ಅಗ್ನಿಪಥ ಯೋಜನೆ ಅಡಿ, ಅಗ್ನಿವೀರರ ನೇಮಕಾತಿ ಜಾಥಾ, ಶಿವಮೊಗ್ಗ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದಿಗೆ ಕೊನೆಗೊಳ್ಳಲಿದೆ.

ಕರ್ನಾಟಕ ಮತ್ತು ಕೇರಳ ವಲಯದ, ನೇಮಕಾತಿ ವಿಭಾಗದ ಅಪರ ಮಹಾನಿರ್ದೇಶಕ, ಮೇಜರ್ ಜನರಲ್ ಹರಿ ಪಿಳ್ಳೈ ಪಾಲ್ಗೊಂಡು, ದೈಹಿಕ ಪರೀಕ್ಷೆಯ 8ನೇ ಹಾಗೂ ಅಂತಿಮ ದಿನವಾದ ನಿನ್ನೆ, ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿದರು.

ತಾಂತ್ರಿಕ, ಲಿಪಿಕ ಮತ್ತು ವೃತ್ತಿಪರ ಹುದ್ದೆಗಳಿಗೆ ನೇಮಕಾತಿ ನಡೆಸಲು, ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ, ದೈಹಿಕ ಕ್ಷಮತೆಯ ಪರೀಕ್ಷೆ ನಡೆಸಲಾಯಿತು. ಇಂದು ವೈದ್ಯಕೀಯ ಪರೀಕ್ಷೆ ಸಹ ಅಂತ್ಯಗೊಳ್ಳುತ್ತಿದೆ.

<><><>

'ಕರ್ನಾಟಕ' ಎಂದು ನಾಮಕರಣಗೊಂಡು, 50 ವ ರ್ಗಳು ತುಂಬಿದ ಹಿನ್ನೆಲೆ, ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ, ನಾಡಿನ ಬಹುತ್ವ ಸಂಸ್ಕೃತಿಯನ್ನು ಸಾರುವ, 'ಕರ್ನಾಟಕ ಸುವರ್ಣ ಸಂಭ್ರಮ–50, ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ' ಅಭಿಯಾನ ಆಯೋಜಿಸಲಾಗಿದೆ.

ಕೊಡವ ಸಾಹಿತ್ಯ ಅಕಾದೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಹಾಗೂ ಕರ್ನಾಟಕ ಅರೆಭಾ ೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾದೆಮಿ ಅಧ್ಯಕ್ಷ ಸದಾನಂದ ಮಾವಜಿ, ಮಡಿಕೇರಿಯಲ್ಲಿ ವಿಷಯ ತಿಳಿಸಿ, ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ, ಆರು ಅಕಾದೆಮಿಗಳಾದ ಕೊಡವ, ಅರೆ ಭಾ ೆ, ತುಳು, ಕೊಂಕಣಿ, ಬ್ಯಾರಿ ಹಾಗೂ ಯಕ್ಷಗಾನ ಅಕಾದೆಮಿಗಳ ಸಹಭಾಗಿತ್ವದಲ್ಲಿ, ಸೆಪ್ಟೆಂಬರ್ 24 ಮತ್ತು 25 ರಂದು ಮಂಗಳೂರಿನಲ್ಲಿ, ಬಹು ಸಂಸ್ಕೃತಿಯ ಕಾರ್ಯಕ್ರಮ ನಡೆಯಲಿದೆ ಎಂದರು.

<><><>

ಸಂಸ್ಕೃತ ಸಾಹಿತ್ಯದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ, ಹಿರಿಯ ಸಂಶೋಧಕ ಡಾಕ್ಟರ್ ಸೂರ್ಯನಾರಾಯಣ ನಾಗೇಂದ್ರ ಹಿತ್ಲಳ್ಳಿ ಸೇರಿ, ಐವರು ವಿದ್ವಾಂಸರಿಗೆ ಕೇಂದ್ರ ಜವಳಿ ಖಾತೆ ಸಚಿವ ಗಿರಿರಾಜ್ ಸಿಂಗ್, ಹೊಸ ದಿಲ್ಲಿಯಲ್ಲಿ ಪ್ರಾಚ್ಯ ವಿದ್ಯಾಭೂಷಣ ಪ್ರಶಸ್ತಿ ನೀಡಿ ಗೌರವಿಸಿದರು.

ಪ್ರಾಚ್ಯ ವಿದ್ಯಾಭೂಷಣ ಪ್ರಶಸ್ತಿ 1 ಲಕ್ಷ ರೂಪಾಯಿ ನಗದು ಬಹುಮಾನ ಒಳಗೊಂಡಿದೆ.

ಹೊಸ ದಿಲ್ಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ಲಾಲ್ ಬಹದ್ದೂರ್ ಶಾಸ್ತ್ರೀ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಆಯೋಜಿಸಿದ್ದ, ಉತ್ಕರ್ಷ ಮಹೋತ್ಸವದಲ್ಲಿ ಈ ಪುರಸ್ಕಾರ ನೀಡಿ, ಗೌರವಿಸಲಾಯಿತು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇಂದು ಹಾವೇರಿ ಜಿಲ್ಲೆಗೆ ಭೇಟಿ ನೀಡಲಿದ್ದಾರೆ.

ರಾಣೇಬೆನ್ನೂರು ತಾಲೂಕು ದೇವರಗುಡ್ಡದಲ್ಲಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಕಂಚಿನ ಪುತ್ಥಳಿ ಅನಾವರಣ ಗೊಳಿಸುವರು.

ಬಳಿಕ ಶ್ರೀ ಕನಕ ಭವನದ ಉದ್ಘಾಟನೆ ನೆರವೇರಿಸಲಿದ್ದಾರೆ. ಮಧ್ಯಾಹ್ನ ಹಾವೇರಿಯ ಐತಿಹಾಸಿಕ ಹೆಗ್ಗೇರಿ ಕೆರೆಗೆ ಬಾಗಿನ ಅರ್ಪಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಕೇಂದ್ರದಿಂದ 80 ಸಾವಿರ ಕೋಟಿ ರೂಪಾಯಿ ಅನುದಾನ ಬಾಕಿ; 16ನೇ ಹಣಕಾಸು ಆಯೋಗದಿಂದ ಸಕಾರಾತ್ಮಕ ಸ್ಪಂದನೆ – ಸಿದ್ದರಾಮಯ್ಯ.

- ಸಂಪೂರ್ಣತಾ ಅಭಿಯಾನ; ಬಳ್ಳಾರಿ ಜಿಲ್ಲೆ ಆಶೋತ್ತರ ತಾಲೂಕು ಕಂಪ್ಲಿಯಲ್ಲಿ, ಆರೋಗ್ಯ ಇಲಾಖೆಯಿಂದ ಜನ ಜಾಗ್ರತಿ.

- **‘ಒಂದು ಜಿಲ್ಲೆ, ಒಂದು ತಾಣ’; ಕೊಪ್ಪಳದ ಇಟಗಿ ಶ್ರೀ ಮಹಾದೇವ ದೇಗುಲದ ಅಭಿವೃದ್ಧಿಗೆ, ಕ್ರಿಯಾ ಯೋಜನೆ – ನಲಿನ್ ಅತುಲ್.**

- **ಹಾಕಿ ಮಾಂತ್ರಿಕ, ಮೇಜರ್ ಧ್ಯಾನಚಂದ್ ಜನ್ಮ ದಿನ; ರಾಷ್ಟ್ರೀಯ ಕ್ರೀಡಾ ದಿನವಾಗಿ ಆಚರಣೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>